ಕರ್ನಾಟಕ ವಿಧಾನ ಸಭೆ

593

ಶ್ರೀ ಪಾಟೀಲ್ ರತ್ನಾಕರ (ತೀರ್ಥಹಳ್ಳಿ)

ಅ) ಪೊಲೀಸ್ ಇಲಾಖೆಯಲ್ಲಿನ ನೌಕರರ ಹಾಗೂ ಪಿ.ಎಸ್.ಐ.ಗಳ ಸಂಖ್ಯೆ ಎಷ್ಟು;

ಆ) ಪೊಲೀಸ್ ಇಲಾಖೆಯು ಸರ್ಕಾರಕ್ಕೆ ಎಷ್ಟು ಜನ ಪೊಲೀಸ್ ಅಗತ್ಯ ಇದೆ ಎಂದು ಶಿಫಾರಸ್ಸು ಮಾಡಿದೆ; (ಪೊಲೀಸ್ ಪೇದೆಗಳು ಮತ್ತು ಪಿ.ಎಸ್.ಐ.ಗಳು ಸೇರಿ)

ಇ) ರಾಜ್ಯಕ್ಕೆ ಎಷ್ಟು ಪೊಲೀಸ್ ಠಾಣೆಗಳ ಅಗತ್ಯವಿದೆ ಹಾಗೂ ಸರ್ಕಾರ ಆ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?

ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು

ಅ) ಪೊಲೀಸ್ ಇಲಾಖೆಗೆ ಮಂಜುರಾದ ಒಟ್ಟು ನೌಕರರ ಸಂಖ್ಯೆ : 1,00,643 ಗಳಾಗಿದ್ದು ಅವುಗಳಲಿ ಪಿ.ಎಸ್.ಐ. ಹುದ್ದೆಗಳ ಒಟ್ಟು ಸಂಖ್ಯೆ 3,915.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ)ಪ್ರಸ್ತುವ ವಾರ್ಷಿಕ ದಾಖಲಾದ ಅಪರಾಧ ಪ್ರಕರಣಗಳು, ಕಾನೂನು ಸುವ್ಯವಸ್ಥೆ ನಿಯಂತ್ರಣ, ಕೋಮುಗಲಭೆ, ಅಪಾಯಕಾರಿ ಚಟುವಟಿಕೆಗಳು, ವಸತಿ ಪ್ರದೇಶದ ವಿಸ್ತರಣೆ ಹಾಗೂ ವಾಹನಗಳ ಸಂಚಾರ ದಟ್ಟಣೆ ಇತ್ಯಾದಿ ಮಾನದಂಡಗಳನ್ನು ಆಧರಿಸಿ ಪೊಲೀಸ್ ಠಾಣೆ, ಸಂಚಾರ ಪೊಲೀಸ್ ಠಾಣೆ / ಹೊರಠಾಣೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳ ಕ್ರೋಢೀಕೃತ ಪಟ್ಟಿಯನ್ನು ಪ್ರತಿ ವರ್ಷ ಸರ್ಕಾರವು ಪರಿಶೀಲಿಸುತ್ತಿದೆ.

ಮಾನ್ಯ ಮುಖ್ಯ ಮಂತ್ರಿಗಳು 2012–13ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ 3 ಸಂಚಾರಿ ಪೊಲೀಸ್ ಠಾಣೆಗಳು ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ 07 ಹೊಸ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಘೋಷಿಸಿರುತ್ತಾರೆ. ಇದಕ್ಕಾಗಿ 2012–13ನೇ ಸಾಲಿನ ಆಯವ್ಯಯದಲ್ಲಿ ರೂ. 20 ಕೋಟಿಗಳ ಅನುದಾನದ ಅವಕಾಶ ಕಲ್ಪಿಸಲಾಗಿದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ 10 ಪೊಲೀಸ್ ಠಾಣೆಗಳನ್ನು ಆದೇಶ ಸಂಖ್ಯೆ : ಹೆಚ್‌ಡಿ 91 ಪಿಓಇ 2012 ದಿನಾಂಕ : 03–07–2012ರಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ರಾಜ್ಯದಲ್ಲಿ ಬಹಳಷ್ಟು ಕಡೆ ಪೊಲೀಸ್ ಠಾಣೆ ಹಾಗೂ ಸಂಚಾರಿ ಪೊಲೀಸ್ ಠಾಣೆ ಸ್ಥಾಪನೆ ಮಾಡಲು ಕೋರಿಕೆಗಳು ಇರುತ್ತದೆ. ರಾಜ್ಯದ

ಸಂಪನ್ಮೂಲ ಕೊರತೆಯಿಂದ ಒಂದೇ ಹಂತದಲ್ಲಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲ ಹಂತ ಹಂತವಾಗಿ ಸ್ಥಾಪನೆ ಮಾಡಲಾಗುತ್ತದೆ.
ಸಂಖ್ಯೆ : ಹೆಚ್‌ಡಿ 153 ಪಿಓಪಿ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ

ಕರ್ನಾಟಕ ವಿಧಾನ ಸಭೆ

293

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಕ್ಕೆ ಈಗ ಒದಗಿಸಲಾಗಿರುವ ಬಸ್ಸುಗಳ ಸಂಖ್ಯೆ ಎಷ್ಟು; ಇವು ಯಾವ ಯಾವ ಗ್ರಾಮಗಳಲ್ಲಿ ಸಂಚರಿಸುತ್ತವೆ;

ಆ) ಇನ್ನೂ ಯಾವ ಯಾವ ಗ್ರಾಮಗಳು ಬಸ್ ಸಂಚಾರದಿಂದ ವಂಚಿತವಾಗಿವೆ.

ಇ) ಬಸ್ ಸಂಚಾರದ ವ್ಯವಸ್ಥೆ ಇಲ್ಲದೇ ಇರುವ ಗ್ರಾಮಗಳಿಗೆ ಯಾವಾಗ ಬಸ್ ಸಂಚಾರವನ್ನು ಪ್ರಾರಂಭಿಸಲಾಗುವುದು?

ಉಪ ಮುಖ್ಯಮಂತ್ರಿಗಳು ಗೃಹ ಮತ್ತು ಸಾರಿಗೆ ಸಚಿವರು

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದ ಗ್ರಾಮೀಣ ಪ್ರದೇಶಗಳಿಗೆ ಒಟ್ಟು 54 ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಗ್ರಾಮಗಳ ವಿವರವಾದ ಪಟ್ಟಿಯನ್ನು ಅನುಬಂಧ–ಅ ನಲ್ಲಿ ಲಗತ್ತಿಸಿದೆ.

ಆ) ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಲಿಯಾಬಾದ್, ಸಿಕಿಂದ್ರಾಬಾದ್ ವಾಡಿ ಮತ್ತು ನೀಲಮ್ಮನಳ್ಳಿ ಹೀಗೆ 3 ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಸಂಪರ್ಕ ಇಲ್ಲದೇ ಇರುವುದರಿಂದ ಬಸ್ ಸೌಕರ್ಯ ಒದಗಿಸಲಾಗಿರುವುದಿಲ್ಲ.

ಇ) ಬಸ್ ಸಂಚಾರ ಇಲ್ಲದೇ ಇರುವ ಈ 3 ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಯೋಗ್ಯವಾದ ರಸ್ತೆ ಸಂಪರ್ಕ ಕಲ್ಪಿಸಿದ ನಂತರ ಬಸ್ ಸಂಚಾರ ಪ್ರಾರಂಭಿಸಲಾಗುವುದು.
ಸಾರಿಇ 70 ಸಾಸಂಪ್ರ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು
ಸಾರಿಗೆ ಮತ್ತು ಗೃಹ